

ಡಾ.ವಿನೋದ ಛೆಬ್ಬಿ

ಏಕಪಕ್ಷೀಯ ಸ್ವಚ್ಛಂದ ಕಾಮವು ಮಾರಕ ಆಗುವಂತೆ ಏಕಪಕ್ಷೀಯ ಕಾಮನಿಗ್ರಹವೂ ಮಾರಕ ಆಗಬಹುದು!

# 160: ಪರಸಂಬಂಧ-23

ಪರಸಂಬಂಧಕ್ಕೆ ಒಳಗಾದ ದಾಂಪತ್ಯಕ್ಕೆ ಸಂಬಂಧಿಸಿದಂತೆ ಸಂಗಾತಿಗಳು ಆತ್ಮವಿಶ್ಲೇಷಣೆ ಮಾಡಿಕೊಳ್ಳುವುದರ ಜೊತೆಗೆ ಪರಸ್ಪರರ ಬೇಡಿಕೆಗಳನ್ನು ತನ್ನ ಸಾಮರ್ಥ್ಯದ ದೃಷ್ಟಿಕೋನದ ಮೂಲಕ ಅರ್ಥಮಾಡಿಕೊಳ್ಳುವುದರ ಬಗೆಗೂ ಚರ್ಚಿಸಿದೆವು.

ದಾಂಪತ್ಯವು ಚೆನ್ನಾಗಿ ನಡೆಯುವಾಗ 'ಸ್ವರ್ಗಕ್ಕೆ ಕಿಚ್ಚು ಹಚ್ಚಿದಂತೆ' ಇರುತ್ತದಾದರೂ, ದಾಂಪತ್ಯಕ್ಕೇ ಕಿಚ್ಚು ಹತ್ತಿದಾಗ ಅದನ್ನು ಮುರಿದುಕೊಳ್ಳುವುದರ ಬಗೆಗೆ ಯೋಚನೆ ಬರುವುದು ಸಹಜ. ಅದರಲ್ಲೂ ವಿಶೇಷವಾಗಿ ಪರಸಂಬಂಧದ ಕಿಚ್ಚನ್ನು ಆರಿಸುವುದು ಅಸಾಧ್ಯವಾದರೆ ದಾಂಪತ್ಯವನ್ನು ಮುರಿದುಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ. ಇಲ್ಲಿ ಅತ್ಯಂತ ಕಠಿಣವಾದ ಸವಾಲೆಂದರೆ, ರೋಗಗ್ರಸ್ತ ದಾಂಪತ್ಯವನ್ನು ಕೊನೆಗಾಣಿಸುವುದು ಹೇಗೆ ಎನ್ನುವುದು.

ವಿಪರ್ಯಾಸವೆಂದರೆ, ಹೆಚ್ಚಿನವರು – ಅದರಲ್ಲೂ ಹೆಂಗಸರು – ಹೊಂದಾಣಿಕೆ ಸಾಧ್ಯವೇ ಇಲ್ಲವೆಂದು ಗೊತ್ತಾದರೂ ಕೆಲವು ಕಾರಣಗಳನ್ನು ಮುಂದಿಟ್ಟುಕೊಂಡು ದಾಂಪತ್ಯದಲ್ಲೇ ಉಳಿಯಲು ನಿರ್ಧರಿಸುತ್ತಾರೆ. ಈ ಕಾರಣಗಳು ಯಾವುವು, ಹಾಗೂ ಇವುಗಳ ಬಗೆಗೆ ಹೇಗೆ ಯೋಚಿಸಬೇಕು ಎನ್ನುವುದರ ಬಗೆಗೆ ಈ ಸಲ ನೋಡೋಣ. ಇವು ಹೆಚ್ಚಿನಂಶ ಮಹಿಳೆಯರಿಗೆ ಅನ್ವಯಿಸುತ್ತವಾದರೂ, ಹೊಸ್ತಿಲು ದಾಟಲು ಹೊರಟಿರುವ ಹೆಂಡತಿಯನ್ನು ಬಿಟ್ಟುಕೊಡದಿರುವ ಗಂಡಂದಿರಿಗೂ ಅಷ್ಟೇ ಅನ್ವಯವಾಗುತ್ತವೆ.

**ನಮ್ಮಲ್ಲಿ ಡೈವೋರ್ಸ್ ಕೊಡುವ ಪದ್ಧತಿಯಿಲ್ಲ:** ಕೆಲವು ಜಾತಿಧರ್ಮಗಳಲ್ಲಿ, ಸಮುದಾಯಗಳಲ್ಲಿ ವಿಚ್ಛೇದನೆಗೆ ಧಾರ್ಮಿಕ ಅನುಮತಿಯಿಲ್ಲ. ಇನ್ನು ಕೆಲವರಲ್ಲಿ ಗಂಡು ವಿಚ್ಛೇದನೆ ಕೊಡಬಹುದೇ ವಿನಾ ಹೆಣ್ಣು ಕೊಡುವಂತಿಲ್ಲ. ಹೇಗಿದ್ದರೂ ಹೊಂದಿಕೊಂಡು ಇರಬೇಕು, ಬಂದದ್ದನ್ನು ಹಣೆಬರಹವೆಂದು ಅನುಭವಿಸಬೇಕು ಎನ್ನುವುದೇ ಇಲ್ಲಿ ನೀತಿಯಾಗಿರುವಾಗ ವಿಚ್ಛೇದನೆ ಎಂದರೆ ಪಾಪ ಆಗುತ್ತದೆ. ಹಾಗಾಗಿ ನೋವು ತಿನ್ನುವವರ ಬಲಿದಾನ ಅನಿವಾರ್ಯ ಆಗುತ್ತದೆ. ಇನ್ನು ಹಲವರು, "ನಮ್ಮ ಪರಿವಾರದಲ್ಲಿ ಯಾರೂ ವಿಚ್ಛೇದನ ಹೊಂದಿಲ್ಲ" ಎನ್ನುತ್ತ, ತುಚ್ಛೀಕರಣಕ್ಕೆ ಒಳಗಾಗುವ ಭಯದಿಂದ ಹೊಸ ದಿಕ್ಕಿನಲ್ಲಿ ಹೆಜ್ಜೆಯಿಡಲು ಅಳುಕುತ್ತಾರೆ. ನಿಮಗೂ ಈ ಸಮಸ್ಯೆ ಇದ್ದರೆ ಹೀಗೆ ಯೋಚಿಸಿ: ವಿಚ್ಛೇದನವನ್ನು ನಿಷೇಧಿಸುವ ಜಾತಿಧರ್ಮದ ತತ್ವಗಳು ಪರಸಂಬಂಧವನ್ನೂ, ಒಬ್ಬರ ಮೇಲೆ ಇನ್ನೊಬ್ಬರ ದಬ್ಬಾಳಿಕೆಯನ್ನೂ ನಿಷೇಧಿಸುತ್ತವೆ. ಹಾಗಾಗಿ, ಒಬ್ಬರು ನಿಷ್ಠೆಯನ್ನು ಮುರಿದಿರುವಾಗ ಇನ್ನೊಬ್ಬರ ನಿಷ್ಠೆಗೆ ಏನು ಬೆಲೆಯಿದೆ? ಅದಲ್ಲದೆ, ಯಾವುದೇ ಧಾರ್ಮಿಕ ತತ್ವಗಳಿಗೆ ಅಲೌಕಿಕ ಅನುಭವದತ್ತ ತೆಗೆದುಕೊಂಡು ಸತ್ವವಿದೆ; ಹಾಗೂ ಇದನ್ನು ಪಡೆಯಲು ಕೆಲವು ಕಟ್ಟಳೆಗಳನ್ನು ಅನುಸರಿಸಬೇಕಾಗುತ್ತದೆ (ಉದಾ. ಕಾಮವನ್ನು ನಿಗ್ರಹಿಸುವುದು) ಆದರೆ ಇವೇ ಕಟ್ಟಳೆಗಳು ಗಂಡಹೆಂಡಿರ ಬಾಂಧವ್ಯಕ್ಕೆ ಅಡ್ಡಿಯಾಗಬಾರದು. ತನ್ನಿಷ್ಟ ಬಂದಂತೆ ಸ್ವೇಚ್ಛಾಕಾಮಕ್ಕೆ ಅವಕಾಶ ಕೊಡುವುದು ದಾಂಪತ್ಯಕ್ಕೆ ಬಾಧಕ ಆಗುವಂತೆ ತನ್ನಿಷ್ಟ ಬಂದಂತೆ ಕಾಮನಿಗ್ರಹವೂ ಬಾಧಕ ಆಗಬಹುದು!

**ನನ್ನ ದಾಂಪತ್ಯವು ಇವೊತ್ತಿಲ್ಲ ನಾಳೆ ಸರಿಹೋಗಬಹುದು:** ಸರಿ ಹೋಗುವುದಕ್ಕೆ ಕಾಯುವುದು ಎನ್ನುವುದು ಮಳೆ ಬರುವುದಕ್ಕೆ ಕಾಯ್ದಂತೆ ಅಲ್ಲ. ಮುರಿದ ದಾಂಪತ್ಯವನ್ನು ಸರಿಪಡಿಸಿಕೊಳ್ಳುವುದು, ಅಥವಾ ಅದನ್ನು ಬಿಟ್ಟು ಹೊರಗೆ ನಡೆಯುವುದು – ಈ ನಿರ್ಧಾರ ನಮ್ಮ ಕೈಯಲ್ಲಿರುವಾಗ ಅದನ್ನು ಸಮಯ-ಸಂದರ್ಭಗಳ ಮೇಲೆ ಹಾಕಿ ಕಾಯುವುದು ಎಳ್ಳಷ್ಟೂ ಸರಿಯಲ್ಲ. ಯಾವ ದಾಂಪತ್ಯವೂ ತನ್ನಷ್ಟಕ್ಕೆ ತಾನೇ ಸರಿಹೋಗಲಾರದು. ಯಾಕೆ? ದಾಂಪತ್ಯವನ್ನು ಕಟ್ಟಿಕೊಂಡಿದ್ದು ನೀವೇ ತಾನೇ? ಕಟ್ಟಿಕೊಂಡಿದ್ದು ಶಿಥಿಲವಾದಾಗ ಭದ್ರಪಡಿಸಿಕೊಳ್ಳದಿದ್ದರೆ ಬಿದ್ದೇಹೋಗುತ್ತದೆ. ಇಲ್ಲಿನ್ನೊಂದು ವಿಷಯವಿದೆ: ನೀವು ಇರುವ ಸ್ಥಿತಿಯಲ್ಲೇ ಇದ್ದರೆ ನಿಮ್ಮ ಸಂಗಾತಿಯೂ ತಾನಿರುವ ಹಾಗೆಯೇ ಇರುತ್ತಾರೆ!

**ದಾಂಪತ್ಯವನ್ನು ಬಿಟ್ಟರೆ ಭಾವನಾತ್ಮಕ ಒಂಟಿತನ ಕಾಡುತ್ತದೆ:** ಭಾವನಾತ್ಮಕ ಸಾಂಗತ್ಯವೇ ದಾಂಪತ್ಯದ ಜೀವಾಳ. ಅದಿಲ್ಲದಿದ್ದರೆ ದಾಂಪತ್ಯವೇ ನೀರಸ. ಆದರೆ ಅನೇಕ ಗಂಡಹೆಂಡಿರ ನಡುವೆ ಸೌಹಾರ್ದದ ಮಾತೇ ಇರುವುದಿಲ್ಲ. ತನ್ನ ಸಂಗಾತಿ ತನ್ನವರಲ್ಲ ಎಂದು ಅನಾಥಪ್ರಜ್ಞೆ ಕಾಡುತ್ತಿದ್ದರೂ ಕೆಲವರು ದಾಂಪತ್ಯದಲ್ಲಿ ಉಳಿಯುವ ಆಯ್ಕೆ ಮಾಡುತ್ತಾರೆ. ಯಾಕೆ? ಇಂಥವರು ತಮ್ಮನ್ನೇ ತಾನು ಪ್ರೀತಿಸಲಾರರು. ಹಾಗಾಗಿ ಒಬ್ಬರೇ ಇದ್ದರೆ ಖಾಲಿತನ ಕಾಡುತ್ತದೆ. ಅದಕ್ಕಾಗಿ ಹೀಗೆ ಯೋಚಿಸಿ: ದಾಂಪತ್ಯದಲ್ಲಿ ಇದ್ದುಕೊಂಡೇ ಒಂಟಿಯಾಗಿದ್ದೀರಿ. ಇನ್ನು ದಾಂಪತ್ಯದ ಹೊರಗೆ ವಿಶೇಷ ವ್ಯತ್ಯಾಸ ಆಗಲಾರದು. ಎಷ್ಟೋ ಸಲ ನಮ್ಮ ವಿಚಾರಗಳ ಬಗೆಗೆ ಭಯವಿರುವುದಿಲ್ಲ, ಬದಲಾಗಿ ನಾವದನ್ನು ಅರ್ಥೈಸುವ ರೀತಿಯು ಭಯ ತರಿಸುತ್ತದೆ. ಉದಾ. 'ನಾನು ಒಂಟಿಯಾಗಿದ್ದೇನೆ' ಎಂದರೆ ನನ್ನ ಜೊತೆಗೆ ಯಾರೂ ಇಲ್ಲ ಎನ್ನುವುದರ ಬದಲು, 'ಈಗಲಾದರೂ ನನ್ನಿಷ್ಟ ಬಂದಂತೆ ಇರಬಹುದು' ಎಂದು ಯೋಚಿಸಬಹುದಲ್ಲವೆ? ನಿಮ್ಮನ್ನು ನೀವು ಪ್ರೀತಿಸುವುದನ್ನು, ನಿಮ್ಮ ಬಯಕೆಗಳಿಗೆ ಮಹತ್ವ ಕೊಡುವುದನ್ನು ಕಲಿತರೆ ಒಂಟಿಯಾಗಿದ್ದರೆ ನೆಮ್ಮದಿಯಿಂದ ಇರಬಹುದು; ಅಷ್ಟೇ ಅಲ್ಲ, ನೆಮ್ಮದಿಯಿಂದ ಬದುಕುವುದಕ್ಕೆ ಒಂಟಿಯಾಗಿ ಇರುವುದನ್ನು ಆಯ್ಕೆ ಮಾಡಿಕೊಳ್ಳಬಹುದು! ಆಗ ಸಂಗಾತಿಯು ಇಲ್ಲದಿದ್ದರೆ ಬೇಸರ ಆಗಬಹುದಷ್ಟೇ ವಿನಾ ಭಯವಾಗುವುದಿಲ್ಲ. (ಈ ಒಂಟಿತನ, ಖಾಲಿತನ, ಹಾಗೂ ತನ್ನನ್ನು ತಾನು ಪ್ರೀತಿಸುವುದರ ಬಗೆಗೆ ಇನ್ನೊಂದು ಸಲ ತಿಳಿದುಕೊಳ್ಳೋಣ.) ಒಂದು ಸಲ ಒಂಟಿಯಾಗಿ ಇರುವುದನ್ನು ಕಲಿತರೆ ಹೊಸ ಸಂಗಾತಿಯನ್ನು ಹುಡುಕಿಕೊಳ್ಳುವುದು ಸುಲಭವಾಗುತ್ತದೆ.

**ಆರ್ಥಿಕ ಭದ್ರತೆಗಾಗಿ ಅವಲಂಬನೆ:** ಕೆಲವು ಹೆಂಗಸರು ಆರ್ಥಿಕ ಭದ್ರತೆಗೋಸ್ಕರ ಎಂಥ ಗಂಡನೊಡನೆಯೂ ಬದುಕುವ ಅನಿವಾರ್ಯತೆ ತಂದುಕೊಳ್ಳುತ್ತ ಅವಹೇಳನಕ್ಕೂ ಒಳಗಾಗುತ್ತ ಇರುತ್ತಾರೆ. ಇವರು ತಮಗೆ ದುಡಿಯುವ ಸಾಮರ್ಥ್ಯವಿಲ್ಲ ಎಂದು ದೃಢವಾಗಿ ನಂಬಿರುತ್ತಾರೆ. ಅಂಥವರಿಗೆ ನಾನು ಹೇಳುವುದು ಒಂದೇ ಮಾತು: ನಿಮ್ಮ ದುಡಿಮೆಯ ಸಾಮರ್ಥ್ಯವನ್ನು ತೀವ್ರವಾಗಿ ಅಲಕ್ಷಿಸುತ್ತಿದ್ದೀರಿ! ಮನೆಯಲ್ಲೇ ಇದ್ದು ಮೊಂಡಾದ ನಿಮ್ಮ ವಿಚಾರಧಾರೆಗೆ ಸ್ವಲ್ಪ ಸಾಣೆ ಹಿಡಿಯಿರಿ. "ಉದ್ಯೋಗ ಎಂದರೆ ಆಫೀಸಿನಲ್ಲಿ" ಎನ್ನುವ ಭ್ರಮೆ ಬಿಡಿ. ನಿಮ್ಮ ಪ್ರತಿಭೆಗೆ, ಕೌಶಲ್ಯಕ್ಕೆ ಒಪ್ಪುವ ಸ್ವತಂತ್ರ ಉದ್ಯೋಗವನ್ನು ಹುಡುಕಿಕೊಳ್ಳಿ. ಈಗಿನ ಕಾಲದಲ್ಲಿ ಎಂಥದ್ದೇ ಕೆಲಸ ಮಾಡಿದರೂ ಸಾಕಷ್ಟು ಹಣ ಸಿಗುತ್ತದೆ. ನನಗೆ ಗೊತ್ತಿರುವ ನಿರಕ್ಷರಿ ಹೆಣ್ಣೊಬ್ಬಳು ಗಂಡನನ್ನು ಬಿಟ್ಟ ನಂತರ ಎರಡು ಮನೆಗಳಲ್ಲಿ ಅಡುಗೆ ಮಾಡಿ ಐದು ಗಂಟೆಗಳಲ್ಲಿ ಹತ್ತು ಸಾವಿರ ಗಳಿಸುತ್ತಾಳೆ – ಇಷ್ಟೇ ಹಣಕ್ಕೆ ಆಕೆಯ ಗಂಡ ಹತ್ತು ಗಂಟೆ ಹೊರಗೆ ಕಳೆಯುತ್ತಿದ್ದಲ್ಲದೆ, ಕುಡಿದು ಮನೆಗೆ ಬಂದು ದಬಾಯಿಸುತ್ತಿದ್ದ. ಇನ್ನೊಬ್ಬಳಂತೂ ಎರಡು ಮಕ್ಕಳ ತಾಯಿ. ಮಕ್ಕಳನ್ನು ಹೆತ್ತು ಬೆಳೆಸಿದ ಅನುಭವವನ್ನೇ ಬಂಡವಾಳ ಮಾಡಿಕೊಂಡು ಬಾಣಂತನದ ಉದ್ಯೋಗವನ್ನು ಸೃಷ್ಟಿಸಿಕೊಂಡಿದ್ದಾಳೆ! ಇನ್ನು, ಗಂಡಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವಾಗ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊರುವ ಹೆಂಗಸರಿಗೆ ಇಲ್ಲೇಕೆ, ಅಮೆರಿಕೆಯಂಥ ವಿದೇಶಗಳಲ್ಲೂ ಭಾರೀ ಬೇಡಿಕೆಯಿದೆ. ನಿಮಗೆ ಯಾವುದರಲ್ಲಿ ಕೌಶಲ್ಯವಿದೆ ಎಂದು ಗೊಂದಲವಿದೆಯೆ? ಚಿಂತೆಯಿಲ್ಲ, ಅವೇಕ್ (AWAKE ದೂರವಾಣಿ: 080-23385874) ಮುಂತಾದ ಸಂಸ್ಥೆಗಳು ಮಹಿಳೆಯರಿಗೆ ವ್ಯಾಪಾರ-ವ್ಯವಹಾರ ಕಲ್ಪಿಸಿಕೊಡುವುದರಲ್ಲಿ ತರಬೇತಿ ನೀಡುತ್ತವೆ.

ಒಬ್ಬರೇ ಬದುಕುವುದು ಹೇಗೆ, ಮಕ್ಕಳ ಗತಿ ಏನು ಮುಂತಾದ ಇನ್ನುಳಿದ ವಿಷಯಗಳನ್ನು ಮುಂದಿನ ಸಲ ನೋಡೋಣ.